ಸಿಗಬಹುದೆಂದು ರಾತ್ರೋರಾತ್ರಿ ಮರಗಳನ್ನು ಕಡಿಸಲು ಮುಂದಾದರು. ಹೊಲಗಳ ತುಂಬಾ ಹೊಂಡಗಳು, ಗುಂಡಿಗಳು ಕಾಣಿಸಿಕೊಂಡವು. ಕೆಲವರು ಗದ್ದೆಯನ್ನು ನಾಟಿ ಮಾಡಿದ್ದುದರಿಂದ ಭತ್ತ ಕೊಯ್ಲು ಮಾಡಿದ ತಕ್ಷಣಕ್ಕೆ ತಮ್ಮ ಹೊಲಗಳಲ್ಲಿಯೂ ಏನಾದರೂ ಸಿಗಬಹುದೆಂದು ಕಾದರು. ಆ ಊರಿನಲ್ಲಿ ಕ್ಷಣಕ್ಷಣಕ್ಕೂ ಹೊಸಹೊಸ ತಿರುವುಗಳು ಸಂಭವಿಸಿದವು. ಊರ ತುಂಬಾ ಹೊಸಹೊಸ ಮುಖಗಳು ಕಾಣಿಸಿಕೊಂಡವು. ಹೊಸಹೊಸ ವಾಹನಗಳು ಬರತೊಡಗಿದವು. ಆ ಊರಿನ ಜನಕ್ಕೆ ತಮ್ಮ ಊರು ಕೌತುಕದ ಕೇಂದ್ರವಾಗಿದ್ದುದಕ್ಕೆ ಕೆಲವರು ಹೆಮ್ಮೆ ಪಟ್ಟರೆ; ಕೆಲವರು ಟಿ.ವಿ.ಯವರ ಮುಂದೇನೇ ಕಾಣಿಸಿಕೊಳ್ಳಲು ಹಾತೊರೆಯುತ್ತಿದ್ದರು. ಮತ್ತೆ ಕೆಲವರು ತಮ್ಮ ಹೊಲಗಳಲ್ಲಿ ಏನಾದರೂ ಸಿಗಬಹುದಾ ಅಂತ ಲೆಕ್ಕ ಹಾಕತೊಡಗಿದರು. ಟಿ.ವಿ. ಚಾನೆಲ್‌ನವರು ಆ ಊರಿಗೆ ಬಂದು ಶಿವನಂಜಯ್ಯನ ಹೊಲದಲ್ಲಿ ಸಿಕ್ಕಿದ್ದಂತಹ ಆ ಜಿಂಕೆಯ ವಿಗ್ರಹದ ಬಗ್ಗೆ ನೇರಪ್ರಸಾರದಲ್ಲಿ ಚರ್ಚೆಗಳನ್ನು ಬಿತ್ತರಿಸಲು ಪ್ರಾರಂಭಿಸಿದರು. ಇತಿಹಾಸಕಾರರು, ಜ್ಯೋತಿಷಿಗಳು, ರಾಜಕಾರಣಿಗಳು, ಸಾಹಿತಿಗಳು, ಸಮಾಜ ಶಾಸ್ತ್ರಜ್ಞರು, ಮಾನವ ಶಾಸ್ತ್ರಜ್ಞರು ವಿಜ್ಞಾನಿಗಳ ಜೊತೆ ಸಂವಾದ, ಚರ್ಚೆಗಳು ನೇರವಾಗಿ ಬಿತ್ತರಿಸಲ್ಪಟ್ಟವು. ಇಂಗ್ಲಿಷ್ ಚಾನಲ್‌ಗಳಲ್ಲಿ 'ಎ ಸ್ಟ್ರೇಂಜ್ ಮಿಥಿಕಲ್ ಗೋಲ್ಡನ್ ಅನಿಮಲ್ ಫೌಂಡ್ ಇನ್ ಇಂಡಿಯಾ', ಸ್ಟ್ರೇಂಜ್ ಗೋಲ್ಡನ್ ಡೀರ್ ಇನ್ ಆ್ಯನ್ ಇಂಡಿಯನ್ ವಿಲೇಜ್', 'ಎ ರೇರ್ ಅನಿಮಲ್ ಫ್ರಂ ಏಲಿಯನ್ ವರ್ಲ್ಡ್ ಫೌಂಡ್ ಇನ್ ಇಂಡಿಯಾ' ಎಂದು ಸ್ಕ್ರೋಲಿಂಗ್ ನ್ಯೂಸ್‌ಗಳು, ಫ್ಲ್ಯಾಷ್ ನ್ಯೂಸ್‌ಗಳು ಬಿತ್ತರಗೊಂಡವು. ಒಂದು ಚಾನೆಲ್‌ನಲ್ಲಿ ಯಾರೋ ಒಬ್ಬ ಪುಣ್ಯಾತ್ಮ 'ಈ ಊರು ಈಗಾಗಲೇ ಪುರಾಣ ಪ್ರಸಿದ್ಧಿಯಾಗಿದ್ದು; ಬಹುಶಃ ಇದು ರಾಮಾಯಣದಲ್ಲಿ ಬರುವ ಜಿಂಕೆಯೇ ಇರಬಹುದು' ಎಂದ. ಇತಿಹಾಸಕಾರರು 'ದಕ್ಷಿಣದ ಕಡೆ ಸುಲ್ತಾನರು ದಂಡೆತ್ತಿ ಬಂದಾಗ ಇಲ್ಲಿಯ ಸ್ಥಳೀಯ ರಾಜರುಗಳು ತಮ್ಮಲ್ಲಿದ್ದ ವಜ್ರವೈಢೂರ್ಯ, ಬೆಳ್ಳಿ ಬಂಗಾರಗಳನ್ನು ಬಾವಿಗಳಲ್ಲಿ ಹಾಕುತ್ತಿದ್ದರು, ಮಣ್ಣಲ್ಲಿ ಹೂಳುತ್ತಿದ್ದರು. ಹಾಗಾಗಿ ಇಲ್ಲಿದ್ದ ಯಾವುದೋ ಒಬ್ಬ ರಾಜ ಹೀಗೆ ತನ್ನಲ್ಲಿದ್ದ ಅಂತಹ ಆಭರಣಗಳನ್ನು ನೆಲದಲ್ಲಿ ಹೂಳಿದ್ದೂ ಇನ್ನೂ ಉತ್ಖನನ ಮಾಡಿದರೆ ಸಾಕಷ್ಟು ಮಾಹಿತಿ ಜೊತೆಗೆ ಇನ್ನೂ ನೆಲದಲ್ಲಿ ಹೂತು ಹೋಗಿರುವಂತಹದ್ದು ಸಿಗಬಹುದು' ಎಂದ. ರಾಜಕಾರಣಿಗಳು 'ಈ ಹಳ್ಳಿಯನ್ನು ಪರಂಪರೆಗಳ ಪಟ್ಟಿಗೆ ಸೇರಿಸಬೇಕು ಹಾಗೂ ಇನ್ನಷ್ಟು ಉತ್ಖನನ ನಡೆಸಿದರೆ ಯಾವುದಾದರೂ ಗತಿಸಿಹೋದ ಸಾಮ್ರಾಜ್ಯದ ಪಳೆಯುಳಿಕೆಗಳು ಸಿಗಬಹುದು' ಎಂದು ಹೇಳಿದರು. ಹೀಗೆ ಚರ್ಚೆಗಳ ಜೊತೆಗೆ ಬ್ರೇಕಿಂಗ್ ನ್ಯೂಸ್‌ಗಳಾದ 'ಅಪರೂಪದ ಪ್ರಾಣಿ, ಬಂಗಾರದ ಜಿಂಕೆ, ಜಿಂಕೆಯನ್ನು ಹೋಲುವ ಪ್ರಾಣಿ' ಬಿತ್ತರಗೊಂಡವು.

* * *

ಶಿವನಂಜಯ್ಯನ ಹೆಂಡತಿ ತನ್ನ ಗಂಡ ಕೊನೆ ಪಕ್ಷ ಒಂದು ಕಿವಿಯನ್ನಾದರೂ ಕೊಯ್ದುಕೊಳ್ಳಲಿಲ್ಲವೆಂದು ಮನೆಯೊಳಗೆ ಕೂತು ಚಿಂತಿಸುತ್ತಿರುವಾಗ, ಮಗಳು ಕಲ್ಲಮ್ಮ, 'ಅಪ್ಪೊಯ್... ಟಿ.ವಿ.ಯವರು ಬಂದವರೆ. ನಿನ್ನತ್ರ ಮಾತಾಡಬೇಕಂತೆ' ಎಂದಳು. 'ಇದೊಳ್ಳೆ ಗ್ರಹಚಾರ ಆಯ್ತಲ್ಲ' ಎಂದುಕೊಂಡ.

ಶಾಸ್ತ್ರೀ ಗುಂಡೇಶಪ್ಪನನ್ನು ಕ್ಷಣ ಬೈಯ್ದುಕೊಂಡ 'ಇಷ್ಟಕ್ಕೆಲ್ಲಾ ಅವನೇ ಕಾರಣ' ಎಂದು. ಗುಂಡೇಶಪ್ಪ ಇವನಿಗೆ ಹೇಳಿದ್ದ: 'ನಿಮ್ಮ ಮನೆಯಾಗೆ ಒಂದಾದ ನಂತರ ಒಂದು ಸಾವು ಸಂಭವಿಸ್ತಿದ್ದಾವೆ. ಎರಡು ವರ್ಷದ ಹಿಂದೆ ನಿಮ್ಮ ಅಪ್ಪ, ಇನ್ನೂ ಗುಂಡುಕಲ್ಲು ಇದ್ದಂಗೆ ಇದ್ದ. ಅವನು ಹೋದ. ಹೋದ ವರ್ಷ ನಿಮ್ಮ ಅಮ್ಮ. ಮಲಗಿದ್ದವಳು ಮಲಗಿದಂಗೇ ಬೆಳಗ್ಗೆ ಏಳದೇ ಉಸಿರೆಳೆದಳು. ಇನ್ನು ನಿನ್ನ ಮಗ ಪಾರ್ವತೇಶ ಹಾವು ಕಡಿದು ಸತ್ತ. ಹೋದ ತಿಂಗಳು ಘನವಾಗಿ ಹಾಲು ಕರೆಯುವ ಹಸ ವಿಚಿತ್ರವಾಗಿ ವಾಂತಿ ಮಾಡಿಕೊಂಡು ಸತ್ತೋಯ್ತು. ಮೇಲಾಗಿ ನಿನ್ನ ಮಗಳು ಕಲ್ಲಮ್ಮನನ್ನು ಬಂದ ಗಂಡುಗಳೆಲ್ಲಾ ಒಪ್ಪಿಕೊಂಡು ಆಮೇಲೆ ಒಂದು ಫೋನು ಇಲ್ಲದೆ ಒಂದು ಕಾಗದಾನೂ ಇಲ್ಲದೆ ಯಾವುದೇ ವರ್ತಮಾನ ಕೊಡದೆ ಸುಮ್ಮನೇ ಆಗ್ತವ್ರೆ. ನಿನಗೆ ಒಂದು ದೋಷವಿದ್ದೂ ಇದರ ಪರಿಹಾರ ಆಗಬೇಕಂದರೆ ನಿಮ್ಮ ಹೊಲದಲ್ಲಿರುವ ಆಲದ ಮರವನ್ನು ಕಡಿಸಬೇಕು. ಅದರ 'ರಾವು' ನಿಮ್ಮ ಮನೆಯವರಿಗೆ ಬಡಿದಿದೆ.'

ಅವನ ಮಾತಿನಂತೆ ಸಣ್ಣ ಶಿವನಂಜಯ್ಯ ಅವಳಿ